Supply of Electricity for Irrigation purpose on the Banks of Thungabhadra River.

Q.—216. Sri K. KENCHAPPA (Hiriyur).—

Will the Government be pleased to state :—

(*a*) when electricity was supplied for irrigation purpose in Harihar Taluk ;

(*b*) the cost at which it was supplied;

(*c*) the total length of miles for which it was supplied (information in terms of miles and furlongs may be furnished) ;

(*d*) the number of lift irrigation pumps that were assured at the time when electricity was proposed to be supplied ;

(*e*) the number of lift irrigation pumps that have been installed and are operating at present ;

(*f*) the number of irrigation wells or kapilas that were working along the bank of Thungabhadra river prior to the installation of electricity ;

(*g*) the number of persons who have applied for supply of electricity and have deposited amounts for the same ?

A.—Sri H. K. VEERANNA GOWDH (Minister for Public Works).—

(*a*) May 1953.

(*b*) Rs. 91,825 for power supply to 5 I.P. sets.

(*c*) 7 miles.

(*d*) 80 I. P. sets.

(*e*) 5 I. P. sets.

(*f*) The information is being collected.

(*g*) 80 persons registered their names. No rule for payment of deposits was in force then.

Sri F. W. CORBETT (Nominated).—Before we proceed to the next item of business, we may move the resolution of condolence on the tragic death of one of our legislators a few days back.

Mr. SPEAKER.—Condolence references will be moved in the afternoon today.

Governor's reply to Motion of Thanks.

Mr. SPEAKER.—I have to make an announcement.

As required by sub-rule (7) of rule 14 of the Rules of Procedure and Conduct of Business in the Mysore Legislative Assembly, I report to the House the reply received by the Governor to the Address adopted by the House. It is as follows :—

"I have received with great satisfaction the expression of your thanks for the speech with which I opened the Budget Session 1957 of both the Houses of the Legislature".

PAPERS LAID ON THE TABLE.

Sri H. S. RUDRAPPA (Minister for Agriculture).—I beg to lay on the Table the Mysore Legislature (Payment of Travelling and Daily Allowances to Members) Rules, 1957 and the Mysore Residences of Chairman and Speaker (Furnishing) Rules, 1956.

Mr. SPEAKER.—The Mysore Legislature (Payment of Travelling and Daily Allowances to Members) Rules, 1957 and the Mysore Residences of Chairman and Speaker (Furnishing) Rules, 1956 are placed on the Table of the House.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ-ಅನುಸೂಚಿತ ಜಾತಿಗಳು).—ಸ್ವಾಮಿ, ಸಾಧಾರಣವಾಗಿ ಪ್ರಶ್ನೋತ್ತರಗಳ ಕಾಲವಾದನಂತರ ಇತರೆ ಕೆಲಸವನ್ನು ಪುರುಮಾಡುವುದಕ್ಕೆ ಮುಂಚೆ ಕರ್ಡೋಲೆನ್ಸ್ ರೆಸಲ್ಯೂಷ್ ತೆಗೆದುಕೊಳ್ಳುವುದು ಸಾಂಪ್ರದಾಯ.

ಅಧ್ಯಕ್ಷರು.—ಅದಕ್ಕಾಗಲೆ ಉತ್ತರ ಕೊಟ್ಟಿದ್ದೇನೆ. ಈ ದಿವಸ ಮಧ್ಯಾಹ್ನ ಸಭೆ ಸೇರಿದಾಗ ಅದನ್ನು ತೆಗೆದು ಕೊಳ್ಳೋಣ. ಅದಕ್ಕೆ ಬೇಕಾದ ತಪಶೀಲು ಈಗಿಲ್ಲ.

A QUESTION OF PRIVILEGE

re : Presence of Deputy Minister in the House.

Sri C. J. MUCKANNAPPA (Gubbi).—I want to bring to your notice that there is a breach of privilege committed in this House. I want a ruling from the Chair.

Mr. SPEAKER.—What is the breach of privilege?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ:—ಈ ಸಭೆಯಲ್ಲಿ ಹನ್ನೊಂದು ಜನ ಮಂತ್ರಿಗಳಿದ್ದಾರೆ, ಮೂರು ಜನ ಉಪಮಂತ್ರಿಗಳಿದ್ದಾರೆ. ಈ ಹನ್ನೊಂದು ಜನ ಮಂತ್ರಿಗಳು ರಾಜ್ಯಪಾಲರಿಂದ ನೇಮಕಮಾಡಲ್ಪಟ್ಟಿದ್ದಾರೆ; ಉಪಮಂತ್ರಿಗಳು ಮುಖ್ಯಮಂತ್ರಿಗಳಿಂದ ನೇಮಕಮಾಡಲ್ಪಟ್ಟು ಈ ಸಭೆಯಲ್ಲಿ ಕುಳಿತುಕೊಂಡು ಇಲ್ಲಿ ನಡೆಯುವ ಚರ್ಚೆಯಲ್ಲಿ ಭಾಗವಹಿಸುತ್ತಿದ್ದಾರೆ. ಉಪಮಂತ್ರಿಗಳು ಮುಖ್ಯಮಂತ್ರಿಗಳಿಂದ ನೇಮಕ ಮಾಡಲ್ಪಟ್ಟು ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿರುವುದು ಈ ಸಭೆಯ ಹಕ್ಕುಬಾಧ್ಯತೆಗಳಿಗೆ ಲೋಪವನ್ನುಂಟುಮಾಡಿದೆ ಎಂಬುದನ್ನು ಈ ಸಭೆಯ ಗಮನಕ್ಕೆ ತಮ್ಮ ಮುಖಾಂತರ ತರಬೇಕೆಂದು ಇಚ್ಛೈಪಡುತ್ತೇನೆ. ಆರ್ಟಿಕಲ್ 164 (1)ರ ಪ್ರಕಾರ "The Chief Minister shall be appointed by the Governor" ಎಂದಿದೆ. The Governor will appoint the Chief Minister and the Chief Minister will appoint the other Ministers. ಮುಖ್ಯ ಮಂತ್ರಿಗಳು ಮತ್ತು ಅವರ ಕ್ಯಾಬಿನೆಟ್ ಮೆಂಬರುಗಳು ರಾಜ್ಯಪಾಲರ ಮುಂದೆ ಪ್ರಮಾಣವಚನವನ್ನು ತೆಗೆದುಕೊಳ್ಳುತ್ತಾರೆ. ಉಪ ಮಂತ್ರಿಗಳನ್ನು ಮುಖ್ಯ ಮಂತ್ರಿಗಳು ನೇಮಕಮಾಡುವುದಕ್ಕೆ ಭಾರತ ರಾಜ್ಯಾಂಗದಲ್ಲೆಲ್ಲೂ ಅವಕಾಶ ಮಾಡಿರುವುದಿಲ್ಲ. ಹಾಗಿರುವಾಗ ನಮ್ಮ ಮುಖ್ಯ ಮಂತ್ರಿಗಳು ಮೈಸೂರಿನಲ್ಲಿ ಮೂರು ಜನ ಉಪಮಂತ್ರಿಗಳನ್ನು ನಾಮಕರಣಮಾಡಿದ್ದಾರೆ. ಲೆಕ್ಕಾಚಾರವಾಗಿ "Ministers" means and includes Ministers and Deputy Ministers ಎಂದು ಆರ್ಟಿಕಲ್ 164ರ ಪ್ರಕಾರ ಇದೆ. ಮಂತ್ರಿಗಳು ರಾಜ್ಯಪಾಲರ ಮುಂದೆ ಪ್ರಮಾಣವಚನ ತೆಗೆದುಕೊಂಡ ಹಾಗೆ ಉಪಮಂತ್ರಿಗಳೂ ಕೂಡ ರಾಜ್ಯಪಾಲರ ಮುಂದೆ ಪ್ರಮಾಣವಚನ ತೆಗೆದುಕೊಳ್ಳಬೇಕಾಗಿತ್ತು. ಆದರೆ ಹಾಗೆಮಾಡದೆ ಉಪಮಂತ್ರಿಗಳು ಮುಖ್ಯಮಂತ್ರಿಗಳಿಂದ ನೇಮಿಸಲ್ಪಟ್ಟು ಮುಖ್ಯಮಂತ್ರಿಗಳ ಮುಂದೆ ಪ್ರಮಾಣ ವಚನವನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ಉಪ ಮಂತ್ರಿಗಳು ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗ ವಹಿಸುವುದಕ್ಕೆ ರಾಜ್ಯಾಂಗದ ಪ್ರಕಾರ ಅಥವಾ ಇನ್ಯಾವುದೇ ಕಾನೂನು ನಮ್ಮಲ್ಲಿದ್ದರೆ ಅದರ ಪ್ರಕಾರ ಅವಕಾಶವಿಲ್ಲ. ಹಾಗೆ ಕಾರ್ಯ ಕಲಾಪಗಳಲ್ಲಿ ಭಾಗವಹಿಸುವುದು ಕಾನೂನಿಗೆ ವಿರೋಧವಾಗುತ್ತದೆ. ಉಪಮಂತ್ರಿಗಳು ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿರುವುದು ಈ ಸಭೆಯ ಹಕ್ಕು ಬಾಧ್ಯತೆಗಳಿಗೆ ಲೋಪ ತಂದಿದೆ ಎಂಬುದನ್ನು ಗಮನಕ್ಕೆ ತರುತ್ತೇನೆ. ಮಂತ್ರಿಗಳು ಪ್ರಮಾಣವಚನವನ್ನು ತೆಗೆದುಕೊಂಡು ನೇಮಕಮಾಡಲ್ಪಟ್ಟ ಮೇಲೆ ಸರ್ಕಾರದಿಂದ ವೇತನ ಪಡೆಯುತ್ತಿದ್ದಾರೆ, ಅವರಿಗೆ ವಿನಾಯಿತಿ ಕೊಟ್ಟಿದ್ದಾರೆ; ಸಂಸ್ಥಾನದ ಶಾಸನ ಸಭೆಯಲ್ಲಿ ವಿನಾಯಿತಿ ತೋರಿಸಿದ್ದಾರೆ; ಅವರು ಪಡೆಯುವ ಸಂಭಾವನೆ ಸಂಬಳವೆಂದು ಪರಿಗಣಿಸಲಾಗುವುದಿಲ್ಲ, ಅವರ ಹುದ್ದೆ office of profit ಆಗುವುದಿಲ್ಲ ಎಂದು ಭಾರತ ರಾಜ್ಯಾಂಗದಲ್ಲಿ, ಶಾಸನ ಸಭೆಯಲ್ಲಿ ಮಾಡಿರುವ ಕಾನೂನು ಪರಿಮಿತಿಯಲ್ಲಿ ಮಂತ್ರಿಗಳಿಗೆ ವಿನಾಯಿತಿ ತೋರಿಸಿದ್ದಾರೆ; ಉಪಮಂತ್ರಿಗಳ ವಿಚಾರದಲ್ಲಿ ವಿನಾಯಿತಿ ತೋರಿಸಿಲ್ಲ. ಉಪಮಂತ್ರಿಗಳು ಮುಖ್ಯ ಮಂತ್ರಿಗಳಿಂದ ನೇಮಿಸಲ್ಪಟ್ಟಮೇಲೆ ನಮ್ಮ ಖಜಾನೆಯಿಂದ ಹಣವನ್ನು ಸರ್ಕಾರಿ ನೌಕರರಂತೆ ಪಡೆಯುತ್ತಿದ್ದಾರೆ; ಕಾಂಪಿಟೆಂಟ್ ಅಥಾರಿಟೀಸ್‌ನಿಂದ ನೇಮಕವಾಗದೆ ತಿಂಗಳಿಗೆ 500 ರೂಪಾಯಿಗಳು ಅಥವಾ ಅದಕ್ಕಿಂತ ಹೆಚ್ಚಾದ ಪೊಬಲಗನ್ನು ಸಂಬಳದ ರೂಪದಲ್ಲಿ ತೆಗೆದುಕೊಳ್ಳುತ್ತಿರುವುದರಿಂದ ಉಪಮಂತ್ರಿಗಳ ಹುದ್ದೆಯು office of profit ಆಗುತ್ತದೆ. 191ನೆಯ ಆರ್ಟಿಕಲ್‌ನಲ್ಲಿ (1)

> "A person shall be disqualified for being chosen as, and for being, a member of the Legislative Assembly or Legislative Council of a State—(a) if he holds any office of profit under the Government of India or the Government of any State specified in the First Schedule other than on office declared by the Legislature of the State by law not to disqualify its holder",

ಎಂದಿದೆ. ಆದ್ದರಿಂದ ಮುಖ್ಯಮಂತ್ರಿಗಳಿಂದ ನೇಮಕವಾದ ಉಪಮಂತ್ರಿಗಳು ಮೈಸೂರು ಸರ್ಕಾರದ ಖಜಾನೆಯಿಂದ ಸಂಬಳ ತೆಗೆದುಕೊಳ್ಳುವುದರಿಂದ ಅವರು office of profit ಹೊಂದಿದ್ದಾರೆ, ಅವರಿಗೆ ಈ ಸಭೆಯಲ್ಲಿ ಸದಸ್ಯರಾಗಿ ಆಗಲಿ ಮಂತ್ರಿಗಳಾಗಿ ಆಗಲಿ ಯಾವ ಕಾರ್ಯಕಲಾಪಗಳಲ್ಲೂ ಭಾಗವಹಿಸುವುದಕ್ಕೆ ಅವಕಾಶವಿಲ್ಲ ಎಂಬುದನ್ನು ಗಮನಕ್ಕೆ ತರುತ್ತೇನೆ.

Article 192:

> "If any question arises as to whether a member of a House of the Legislature of a State has become subject to any of the disqualifications mentioned in clause (1) of article 191, the question shall be referred for the decision of the Governor and his decision shall be final"

ಅದಕ್ಕೋಸ್ಕರವಾಗಿ ನಾನು ಸಭಾಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಉಪಮಂತ್ರಿಗಳು ರಾಜ್ಯಪಾಲರ ಮುಂದೆ ಪ್ರಮಾಣವಚನವನ್ನು ತೆಗೆದುಕೊಳ್ಳದೆ ಇರುವುದರಿಂದ, ರಾಜ್ಯಪಾಲರಿಂದ ನೇಮಿತರಾಗಿರತಕ್ಕ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಪ್ರಮಾಣವಚನವನ್ನು ತೆಗೆದುಕೊಂಡು, ಅವರಿಂದ ನೇಮಿತರಾಗಿ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದು ಸರಿಯಲ್ಲ. ಮತ್ತೆ ಅವರು ಮುಖ್ಯಮಂತ್ರಿಗಳಿಂದ ನೇಮಕವಾಗತಕ್ಕ ಕಾಲದಲ್ಲಿ, ಉಪಮಂತ್ರಿಗಳಿಗೆ ಇಷ್ಟು ವೇತನ ಕೊಡಬೇಕು ಎಂದು ಆದೇಶ ಇರುವುದೂ, ಅವರು ಆ ರೀತಿ ತೆಗೆದುಕೊಂಡಿರುವುದೂ—ಇವನ್ನೆಲ್ಲಾ ನೋಡಿದರೆ, ಅವರು ಈ ಸಭೆಯಲ್ಲಿ ಇತರ ಸದಸ್ಯರಂತೆ ಇರುವುದಕ್ಕಾಗುವುದಿಲ್ಲ. ಈ ಸಭೆಯಲ್ಲಿ ರಾಜ್ಯಪಾಲರಿಂದ ನೇಮಿತವಾಗಿರುವ ಮಂತ್ರಿಗಳಿಗೆ ಮಾತ್ರ ಸ್ಥಳವಿದೆ. ಯಾವ ಸರ್ಕಾರೀ ನೌಕರರಿಗೂ ಇಲ್ಲಿ ಸ್ಥಳವಿಲ್ಲ. ಅವರು ಮುಖ್ಯ ಮಂತ್ರಿಗಳಿಂದ ನೇಮಿತರಾಗಿ ಸಂಬಳ ಸಾರಿಗೆಗಳನ್ನು ತೆಗೆದುಕೊಳ್ಳುತ್ತಾ ಇರುವುದರಿಂದ ಅವರನ್ನು ನಾನು ಸರ್ಕಾರೀ ನೌಕರರಂತೆ ಭಾವನೆಮಾಡುತ್ತೇನೆ. ಅವರು ಈ ಸಭೆಯಲ್ಲಿರುವುದಕ್ಕೆ ಅರ್ಹರಲ್ಲವೆಂದು ತಮ್ಮಲ್ಲಿ ಬಹಳ ವಿನಯದಿಂದ

ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಈ ಮೂರು ಜನ ಉಪಮಂತ್ರಿಗಳು ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದರಿಂದ ಈ ಸಭೆಯ ಘನತೆಗೆ ಮತ್ತು ಹಕ್ಕುಬಾಧ್ಯತೆಗೆ ಧಕ್ಕೆ ಬಂದಿದೆ. ಆದ್ದರಿಂದ ಈ ಸಭೆಯಿಂದ ಆ ಮೂರುಜನ ಉಪಮಂತ್ರಿಗಳನ್ನು ಡಿಸ್ ಮಿಸ್ ಮಾಡಿ ಮಂತ್ರಿಮಂಡಲದಿಂದ ಡಿಬಾರ್ ಮಾಡ ಬೇಕೆಂದು ತಮ್ಮ ಮುಂದೆ ಹೇಳುತ್ತೇನೆ.

Mr. SPEAKER.—The most important question, as I understand, is, whether the Deputy Minister has to take his oath before the Governor. The second point is that since the Deputy Minister draws his salary, he must be said to hold an office of profit and naturally incurs the disqualification. These are the two points the Hon'ble Member has raised in his point of order, or point of breach of privilege.

I should say that the Chief Minister is entitled under Article 164 of the Constitution to appoint his Council of Ministers. The 'Council of Ministers' includes also the Deputy Ministers. The question is whether the Deputy Minister has to take his oath before the Governor or before the Chief Minister himself. The question was referred to the Government of India by this Office and the Government of India have given their opinion in this respect. I would like to read the whole portion for the benefit of the Hon'ble Members :

(Extract of Letter No. 14/24/57 Pub. I from the Government of India—Ministry of Home Affairs, dated New Delhi 2, the 21st May 1957).

"Subject: Deputy Ministers—administration of Oaths of Office and of Secrecy.

"A question has been raised whether the oath of Office and Secrecy to a Deputy Minister should be administered by the Governor or by the Chief Minister of the State concerned. This question has been examined in consultation with the Ministry of Law. The position is as follows :

"If a Deputy Minister is a Member of the Council of Ministers, the oath of office and of secrecy would have to be administered to him by the Governor himself in view of the provisions of article 164 (3) of the Constitution. If, on the other hand, a Deputy Minister is not a Member of the Council of Ministers, the aforesaid provision of the Constitution will not apply to him. It may, however, be mentioned that a Deputy Minister who is not a member of the Council of Ministers would be, as it were, an officer of the Government. If he is a Member of the Legislature, the complicated question whether the office of Deputy Minister would be office of profit might arise. Furthermore, he will not be able to take advantage of the provisions of article 177 and, in the case of a State having a Legislative Council, address the other House of which he is not a Member and if he is not a Member of either House of the Legislature, he cannot take part in the proceedings of either House.

"As the full implications of the above legal provision may not be known to all the State Governments, (*and may I add, 'to the Members of the House'*), the point is brought to their notice for their information".

Since the Hon'ble Deputy Ministers are Members of this House, they are entitled to sit in the House. But the question arises, since they are holding a post of profit, whether they are disqualified under article 191 to sit in this House. The Hon'ble Member will know that the Mysore Legislature (Prevention of Disqualification) Act, 1956 has removed the disqualification in this respect. I will read for the benefit of the House the provisions of Article 191 :

"A person shall be disqualified for being chosen as, and for being, a member of the Legislative Assembly or Legislative Council of State—

(*a*) if he holds any office of profit under the Government of India or the Government of any State specified in the First Schedule, other than an office declared by the Legislature of the

(MR. SPEAKER.)

State by law not to disqualify its holder".

Such an item of legislation has been passed and the disqualification has been removed by the Mysore Legislature (Prevention of Disqualification Act, 1956. As the disqualification has been removed, the Deputy Ministers are entitled to sit in this House and draw their salary.

But I must tell the Hon'ble Member that there is this difference. If the Deputy Ministers take their oath before the Governor, they become actually Members of the Council of Ministers. If they do not take their oath before the Governor, but take oath before the Chief Minister, they cannot be called as Members of the Council of Ministers. But they do not cease to be Deputy Ministers. They will not be able to hold cabinet rank.

There is also this distinction: if they take their oath before the Governor, they will be entitled to sit in the Upper House and act on behalf of the Government. If they take the oath before the Chief Minister, they are not entitled to sit in the Upper House. They are only entitled to sit in this House because they happen to be members of this House and they can take part in the debates. They can also act on behalf of the Government in this House. But since the Deputy Ministers sitting here have not taken oath before the Governor, they cannot go to the Upper House and take part in its proceedings, and, as facts stand, they have not been sitting in the Upper House. They cannot act on behalf of the Government in the Upper House.

The matter, I suppose, is quite clear and I am sorry, I cannot uphold the point of breach of privilege raised by the Hon'ble Member Shri Muckannappa.

Sri M. C. NARASIMHAN (Kolar Gold Fields).— I had a request to make with reference to the copies of the Report submitted by the Government of Mysore to the Finance Commission. I had made a request last time almost at the beginning of the Session and so far we have not been supplied with any copies.

MR. SPEAKER.—I will see that as early as possible, copies of the Reports are given to the Hon'ble Members.

9-30 A.M.

BUDGET FOR 1957-58. GENERAL DISCUSSION—(*Continued*).

*ಶ್ರೀ ಬಿ. ಕೆ. ಪಟ್ಟರಾಮಯ್ಯ (ಚನ್ನಪಟ್ಟಣ).— ಸ್ಪಾಮೀ, ಈಗಾಗಲೇ ನನ್ನ ಮಾನ್ಯ ಮಿತ್ರರನೇಕರು ಹಣಕಾಸಿನ ಆಯವ್ಯಯದ ಅಂಕಅಂಶಗಳ ಮೇಲೆ ಮಾತನಾಡಿದ್ದಾರೆ. ನಾನು ಕೆಲವು ವಿಷಯಗಳನ್ನು ಮಾತ್ರ ಮಾತನಾಡಲು ಇಚ್ಛಿಸುತ್ತೇನೆ. ಈ ಸಭೆಯಲ್ಲಿ ಸರ್ಕಾರದ ಆಡಳಿತದ ವಿಷಯದಲ್ಲಿ ಹೆಚ್ಚು ಟೀಕಿಸಲು ಎರಡು ಅವಕಾಶಗಳು ನಮ್ಮ ಮುಂದೆ ಇವೆ. ಒಂದು ರಾಜ್ಯಪಾಲರ ಭಾಷಣದ ಸಮಯದಲ್ಲಿ, ಎರಡನೆಯದು ಈ ಬಡ್ಜೆಟ್ಟಿನ ಜನರಲ್ ಡಿಸ್‌ಕಷನ್ನಿನ ಸಮಯದಲ್ಲಿ. ನಾವು ಸರ್ಕಾರದಆಡಳಿತದ ಲೋಪ ದೋಷಗಳನ್ನು ಸರ್ಕಾರದ ಮುಂದೆ ಹೇಳಿ ಅವರಿಂದ ಸರಿಯಾದ ಉತ್ತರ ಪಡೆಯಲು ಇರತಕ್ಕ ಅವಕಾಶ ಇವೆರಡೇ ಆಗಿವೆ.

ಈಗಾಗಲೇ ಈ ಸಭೆಗೆ ಗೊತ್ತಿರುವಂತೆ ರಾಜ್ಯ ಪಾಲರ ಭಾಷಣದ ಮೇಲೆ ಚರ್ಚೆಗಳಾಗಿ ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳು ಮಾತನಾಡುವಾಗ ಅನೇಕ ಟೀಕೆ ಟಿಪ್ಪಣಿಗಳಿಗೆ ಸರಿಯಾದ ಉತ್ತರಗಳನ್ನು ಕೂಡ ಕೊಡದೆ ಕೆಲವನ್ನು ಇಗ್ನೋರ್ ಮಾಡಿದ್ದಾರೆ. ಉದಾಹರಣೆಗಾಗಿ ಒಂದು ವಿಷಯವನ್ನು ಹೇಳುತ್ತೇನೆ. ಚನ್ನಪಟ್ಟಣದಲ್ಲಿ ಆಗಿರತಕ್ಕಂಥ ಪೋಲೀಸು ದೌರ್ಜನ್ಯದ ವಿಷಯದಲ್ಲಿ ಎಷ್ಟೊಂದು ಜನತೆಗೆ ಹಿಂಸೆಯಾಯಿತು ಎನ್ನುವುದನ್ನು ಪರಿಶೀಲಿಸಲು ಸರಕಾರವು ಒಂದು ಜುಡಿಷಿಯಲ್ ಎಕ್ಸ್‌ಪೈರಿ ಕಮಿಟಿಯನ್ನು ನೇಮಕ ಮಾಡಬೇಕೆಂದು ಈ ಸಭೆಯ ಗಮನಕ್ಕೆ, ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಮತ್ತು ಕೇಂದ್ರ ಸರ್ಕಾರದ ಪ್ರಧಾನಿಗಳ ಗಮನಕ್ಕೆ ತಂದಿದ್ದಾಗ್ಯೂ ಕೂಡ ಈ ಸರ್ಕಾರದಿಂದ ಏನನ್ನೂ ಮಾಡಲಾಗಲಿಲ್ಲ. ಈ ದೌರ್ಜನ್ಯದಿಂದ ನೂರಾರು ಜನಗಳಿಗೆ ಚಿತ್ರಹಿಂಸೆಗಳಾದವು ಮತ್ತು ತೊಂದರೆಗಳಾದವು. ನನಗೆ ಬಹುಶಃ ಸರಕಾರದವರು ಇದೇ ಸ್ಥಿತಿಯಲ್ಲಿ ಉಳಿಯುತ್ತಾರೆಯೋ ಇಲ್ಲವೋ ಎನ್ನುವ ಒಂದು ಶಂಕೆಯಿದೆ. ಮನುಷ್ಯನ ಅಳಿವು ಮತ್ತು ಉಳಿವು ಭಗವಂತನ ಕೈಯಲ್ಲಿದೆ. ಆದರೆ ಅಂತಹ ಭಗವಂತನನ್ನೂ ಕೂಡ ಇವರುಗಳ ಮರೆಯುತ್ತಿರುವಂತೆ ಕಾಣುತ್ತದೆ. ಹೀಗಿರುವಾಗ ಪ್ರತಿಯೊಂದು ಸಣ್ಣ ಪುಟ್ಟ ವ್ಯವಹಾರಗಳಲ್ಲಿಯೂ ಮಂತ್ರಿ ಮಂಡಲ ಕೈಹಾಕುತ್ತಿದೆ. ಸಾಧಾರಣವಾದ ಒಂದು ಪೋಲೀಸು ಕಾನ್‌ಸ್ಟೇಬಲ್ ಏನಾದರೂ ಈ ಮಂತ್ರಿಮಂಡಲದವರ ಪೈಕಿ ಯಾರ ಮಾತನ್ನಾದರೂ ಆಡಿದರೆ ಆ ಬಡ ಕಾನಸ್ಟೇಬಲ್ ಕೂಡ ಉಳಿಯುವುದಕ್ಕೆ ಈ ದಿವನ ಸಾಧ್ಯವಿಲ್ಲ. ಇನ್ನು ತಾಲ್ಲೂಕಿನಲ್ಲಿರುವ ಅಮಲ್ದಾರರುಗಳು ಇವರ ಕೈಗೊಂಬೆಗಳಾಗಿದ್ದಾರೆ. ಇವರುಗಳಿಗೆಲ್ಲ ಈ ಮಂತ್ರಿಗಳೇ ಸಂಬಳ ಕೊಡುತ್ತಿರುವರೆಂಬ ಭಾವನೆ ಬಂದಿದೆ. ದೇಶದ ಪ್ರತಿಯೊಬ್ಬ ಪ್ರಜೆಯಿಂದ ಬಂದಿರತಕ್ಕ ಹಣದಿಂದ ಇವರುಗಳು ಜೀವನ ಮಾಡುತ್ತಿರುವರೆಂಬ ಅರಿವು ಇರಬೇಕು. ಈ ದಿವನ ಆ ರೀತಿಯಾಗಿ ವರ್ತಿಸದೆ ಇರುವುದರಿಂದ ಬಡ ಜನತೆಗೆ ಬಹಳ ತೊಂದರೆಯಾಗುತ್ತಿದೆ. ಸರ್ಕಾರದಿಂದ ದೊಡ್ಡ ದೊಡ್ಡ ಸಂಬಳಗಳನ್ನು ತೆಗೆದು